ಮಾಜಿ ಅಧ್ಯಕ್ಷರಾದ ಎಂ.ಕಂಪಣ್ಣ, ಯೂತ್ ಕಾಂಗ್ರೆಸ್ ಮತ್ತು ಕುರುಬರಹಳ್ಳಿ ಗ್ರಾಮಸ್ಥರು ಹಾಜರಿದ್ದರು.

Times of Karnataka – 21/05/14 – pg no-2

# 'ಸಂಪನ್ಮೂಲಗಳ ಸದ್ಬಳಕೆಯಿಂದ ದೇಶದ ಅಭಿವೃದ್ಧಿ ಸಾಧ್ಯ'





**ಆನೇಕಲ್:** ಒಂದು ದೇಶವು ಪ್ರಗತಿಯಾಗಬೇಕೆಂದರೆ ಆ ದೇಶದಲ್ಲಿರುವ ಸಂಪನ್ಮೂಲಗಳನ್ನು ವೈಜ್ಞಾನಿಕ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಗ್ಲೋಬಲ್ ಅಲೆನ್ಸ್‌ನ ನಿರ್ದೇಶಕ ಮಹೇಂದ್ರ ಕತ್ರೀಸನ್ ರವರು ತಿಳಿಸಿದರು.

ಪಟ್ಟಣದ ಶಿರಡಿ ಸಾಯಿ ಇಂಜಿನಿಯರ್ ಕಾಲೇಜಿನ ವಿದ್ಯಾರ್ಥಿಗಳು ಯೋಜನೆ ಪರೀಕ್ಷೆ ಅಂಗವಾಗಿ ಸ್ವತಃ ತಯಾರಿಸಿದ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಯುವಕ-ಯುವತಿ ಯರಲ್ಲಿ ತಾಂತ್ರಿಕ ಶಿಕ್ಷಣವನ್ನು ನೀಡಲು ಪ್ರತಿ ಕಾಲೇಜಿನಲ್ಲಿ ಹೆಚ್ಚಾಗಿ ತಾಂತ್ರಿಕ ತರಬೇತಿ ಶಿಬಿರಗಳನ್ನು ನಡೆಸಬೇಕು. ಯುವಕ-ಯುವತಿಯರು ಗುಣಮಟ್ಟದ ತಾಂತ್ರಿಕ ತರಬೇತಿಗಳನ್ನು ಪಡೆದು ಹೊಸ ಸಂಶೋಧನೆಗಳನ್ನು ಮಾಡಿ ಹೊಸ ಉತ್ಪನ್ನಗಳನ್ನು ನಿರ್ಮಾಣಮಾಡಿ ದೇಶವನ್ನು ಅಭಿವೃದ್ಧಿ ಪಥದತ್ತ ಸಾಗಿಸಲು ಸಹಕರಿಸಿ ಎಂದು ತಿಳಿಸಿದರು.

ಶಿರಡಿ ಸಾಯಿ ಇಂಜಿನಿಯರ್ ಕಾಲೇಜಿನ ಪ್ರಾಂಶುಪಾಲರಾದ ವೈ.ವಿಜಯಕುಮಾರ್ ಮಾತನಾಡಿ, ಕೈಗಾರಿಕೆಗಳಲ್ಲಿ ಹಲವಾರು ಉದ್ಯೋಗವಿದ್ದರೂ ಸಹ ಯುವಕ-ಯುವತಿಯರಲ್ಲಿ ತಾಂತ್ರಿಕ ಕೌಶಲ್ಯವಿಲ್ಲದೆ ದೇಶದಲ್ಲಿ ವರ್ಷಕ್ಕೆ ಸುಮಾರು 75 ಲಕ್ಷಯುವಕ-ಯುವತಿಯರು ನಿರುದ್ಯೋಗಿಗಳಾಗಿ ಹೊರ ಉಳಿಯುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಯುವತಿಯರು ಕೇವಲ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮುಗಿಯುತ್ತಿದ್ದಂತೆ ಪೋಷಕರು ಹೆಣ್ಣು ಮಕ್ಕಳಿಗೆ ಬಾಲ್ಯದಲ್ಲಿಯೇ ಮದುವೆಯನ್ನು ಮಾಡುತ್ತಿದ್ದಾರೆ. ಇನ್ನು ಕೆಲವು ಯುವಕ ಯುವತಿಯರಲ್ಲಿ ಜೀವನದ ಮುಂದಿನ ಧ್ಯೇಯ ಮತ್ತು ಉದ್ದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳದೆ ಕೇವಲ ನಾಮಕಾವಸ್ಥೆಗೆ ಶಿಕ್ಷಣವನ್ನು ಪಡೆದು ಸುಮ್ಮನಾಗುತ್ತಿದ್ದಾರೆ ಎಂದರು.

ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಕೌಶಲ್ಯದ ಜ್ಞಾನವನ್ನು ನೀಡಲು ಶಿರಡಿ ಸಾಯಿ ಇಂಜಿನಿಯರ್ ಕಾಲೇಜ್ ಸಂಸ್ಥೆಯು ಹಗಲು-ಇರಳು ಶ್ರಮಿಸುತ್ತಿದ್ದು ಪ್ರಜ್ಞಾವಂತ ಯುವಕ-ಯುವತಿಯರು ಸಂಸ್ಥೆಯ ಜೊತೆ ಕೈಜೋಡಿಸ ಬೇಕು ಎಂದು ಮನವಿ ಮಾಡಿದರು.

**ಹೊಸ ಸಂಶೋಧನೆ:** ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಮಾರುತಿ ಕಾರ್ ಇಂಜಿನ್ ಬಳಸಿ ಎಲಿಕಾಪ್ಟರ್ ತಯಾರಿಕೆ ಮತ್ತು ಎಟಿಮ್ ಬ್ಯಾಂಕ್‌ಗಳ ಭದ್ರತೆ ಕುರಿತು ಹೊಸ ತಂತ್ರಗಾರಿಗೆ. ಅಂಗವಿಕಲರಿಗೆ ಯಾವುದೇ ಪೆಟ್ರೋಲ್-ಡೀಸಲ್ ಬಳಸದ ವಾಹನ, ವ್ಯವಸಾಯದಲ್ಲಿ ತಾಂತ್ರಿಕತೆಯನ್ನು ಬಳಸಿ ಅಧಿಕ ಇಳುವರಿಯನ್ನು ಪಡೆಯಲು ಹೊಸ ಉಪಕರಣಗಳು ಮತ್ತು 20ಕ್ಕೂ ಹೆಚ್ಚು ಎಲೆಕ್ಟ್ರಾನಿಕ್ ಹೊಸ ಉಪಕರಣಗಳನ್ನು ಕಡಿಮೆ ಹಣದಲ್ಲಿ ಶಿರಡಿ ಸಾಯಿ ಇಂಜನಿಯರ್ ಕಾಲೇಜಿನ ವಿದ್ಯಾರ್ಥಿಗಳು ತಯಾರು ಮಾಡಿದ್ದು ಬಹಳ ವಿಶಿಷ್ಟವಾಗಿತ್ತು.

ಕಾರ್ಯಕ್ರಮದಲ್ಲಿ ಶಿರಡಿ ಸಾಯಿ ಇಂಜಿನಿಯರ್ ಕಾಲೇಜಿನ ವ್ಯವಸ್ಥಾಪಕ ಮುತ್ತು, ಸಾಯಿ ಪ್ರಕಾಶ್ ಮುತ್ತು, ಶಿವಶಕ್ತಿ ಬಾಲನ್, ಅರುಣ್ ಕುಮಾರ್ ಹಾಗೂ ಕಾಲೇಜಿನ ಉಪನ್ಯಾಸಕರು ಇದ್ದರು.